# ಎಲ್ಲಿ ಜಾರಿತೋ ಮನವು ಎಲ್ಲೆ ಮೀರಿತೋ...

ರಾತ್ರಿಯ ಕತ್ತಲಿನ ಸೆರಗಿನ ಮರೆಯಲ್ಲಿ ಬಸ್ಸಿನ ಕಿಟಕಿಯ ದೊಡ್ಡ ಗಾಜಿನ ಹೊರಮೈಯ ಮೇಲೆ ಕಣ್ಣೀರು ಸುರಿಸುತ್ತಿದ್ದ ಮಳೆ, ತನ್ನದೇ ಹನಿಗವನಗಳ ಬರೆದು ನೀರಿನಲ್ಲಿ ಮತ್ತೆ ಒರೆಸಿ ಮತ್ತೆ ಹೊಸದಾಗಿ ಬರೆಯುತ್ತಿದೆ. ಒಳಗಡೆ ಬಿಮ್ಮಗೆ ಕುಳಿತೆಲ್ಲ ಪ್ರಯಾಣಿಕರೆದೆಯ ಬಿಸಿಯುಸಿರು ಹೊರಗಿನ ತಂಪಿಗೆ–ಒಳಗಿನ ಬಿಸುಪಿಗೆ ಆವಿಯಾಗಿ ಗಾಜಿನ ಒಳಮೈಯನ್ನು ಮಂಜುಗಟ್ಟಿಸುತ್ತಿದೆ. ಕಿಟಕಿಯ ಪಕ್ಕ ಕುಳಿತ ನಾನು ಮೆಲ್ಲನೆ ಕೈ ಹಸ್ತದಿಂದ ಮಂಜುಗಟ್ಟಿದ ಕಿಟಕಿಯ ಗಾಜನ್ನೊರೆಸಿದೆ. ಗಾಜಿನಲ್ಲಿ ನನ್ನದೇ ಸೋತುಹೋದ ಮುಖದ ಪ್ರತಿಬಿಂಬ, ಆ ಪ್ರತಿಬಿಂಬದ ಮೇಲೆ ಮಳೆನೀರಿನ ಜಾರುಬಂಡಿಯಾಟ. ಕ್ಷಣಮಾತ್ರದಲ್ಲಿ ಪ್ರತ್ಯಕ್ಷವಾಗಿ, ಉಲ್ಕೆಗಳಂತೆ ಹಿಂದಕ್ಕೆಲ್ಲೋ ಓಡಿಬಿಡುವ ದಾರಿಯ ದೀಪಗಳು, ಕೂದಲಿನೆಳೆಯಷ್ಟೇ ತೆರೆದಿದ್ದ ಕಿಟಕಿಯ ಗಾಜಿನೆಡೆಯಿಂದ ಗಾಳಿ–ಮಳೆಹನಿಯ ಸಿಂಚನ. ಬಸ್ಸಿನೊಳಗಿನ ದೀಪಗಳೆಲ್ಲ ಆರಿ, ಬಸ್ಸು ನಗರವ್ಯಾಪ್ತಿಯನ್ನು ದಾಟಿ ತನ್ನ ವೇಗವನ್ನು ಹೆಚ್ಚಿಸಿಕೊಳ್ಳುತ್ತಿದ್ದಂತೆಯೇ ನನ್ನ ಮನಸ್ಸಿಗೂ ಅದರ ಯೋಚನೆಗಳಿಗೂ ಲಹರಿಗಳಿಗೂ ನೂರುಬಂಡಿವೇಗ!

ನನ್ನೆಲ್ಲ ರಾತ್ರಿಯ ಪ್ರಯಾಣಗಳೂ ಹೀಗೆಯೇ. ಪ್ರಯಾಣದಲ್ಲಿ ಸ್ನೇಹಿತರು ಜೊತೆಗಿದ್ದರೆ ನಾನು ತುಂಬಾ ಸುಖಿ. ಅವರೊಂದಿಗೆ ಮಾತನಾಡಿಕೊಳ್ಳುತ್ತ, ಕೀಟಲೆ, ಬೈದಾಟಗಳಿಂದ ನನ್ನನ್ನು ನಾನೇ ಮನಸ್ಸಿನ ಮಾತಿನ ಹಿಡಿತಕ್ಕೆ ಸಿಕ್ಕದಂತೆ ಕಾಪಾಡಿಕೊಳ್ಳುತ್ತ ಪ್ರಯಾಣ ಮುಗಿಸಿಬಿಟ್ಟಿರುತ್ತಿದ್ದೆ. ಆದರೆ ನನ್ನ ದುರಾದೃಷ್ಟಕ್ಕೆ ಇವತ್ತು ನನ್ನೊಟ್ಟಿಗೆ ಯಾರೂ ಇಲ್ಲ. ನಮ್ಮೂರಿನ ಈ ಬಸ್ಸಿನ ತುಂಬ ನನಗೆ ಪರಿಚಿತ ಮುಖಗಳೇ ಇದ್ದರೂ ಇವರನ್ನೆಲ್ಲ ಎಲ್ಲಿ ನೋಡಿದ್ದೆ, ಹೇಗೆ ಗೊತ್ತು ಎಂಬ ಯಾವುದೂ ನೆನಪಿನ ತಂತು ಸಿಕ್ಕದೇ ಸುಮ್ಮನೆ ಗಂಭೀರವದನನಾಗಿ ನನ್ನ ಸೀಟ್‌ನಲ್ಲಿ ಕುಳಿತಿದ್ದೇನೆ. ಕೊನೆಗೂ ತನ್ನ ಮಾತಿಗೆ, ವಿಚಾರಣೆಗೆ, ಪಾಟೀಸವಾಲಿಗೆ ನಾನು ಸಿಕ್ಕಿದ್ದಕ್ಕೆ ನನ್ನ ಮನಸ್ಸಿಗೆ ಗಹಗಹಿಸಿ ನಗುವಷ್ಟು ಖುಷಿ.

ನನ್ನ ಪ್ರತಿಯೊಂದು ಒಬ್ಬಂಟಿ ಪ್ರಯಾಣದಲ್ಲೂ ನನ್ನ ಮನಸ್ಸು ಮೆತ್ತಗೆ ನನ್ನೊಡನೆ ಸಂಭಾಷಣೆಗಿಳಿದುಬಿಡುತ್ತದೆ, ಹಿಂದಿನ ದಿನಗಳ ನನ್ನೆಲ್ಲ ಕ್ರಿಯೆ–ಪ್ರಕ್ರಿಯೆ, ಆಲಸ್ಯವನ್ನೆಲ್ಲ ವಿಚಾರಿಸುತ್ತದೆ, ಪ್ರತಿಯೊಂದಕ್ಕೂ ವಿವರಣೆ ಕೇಳುತ್ತದೆ! ನನ್ನ ಮನಸ್ಸಿಗೆ ನಾನು ಸುಳ್ಳೇ ಸಮಾಧಾನದ ಮಾತುಗಳನ್ನಾಡುವಂತಿಲ್ಲ, ಸಮರ್ಥಾಯಿಷಿ ಕೊಡುವಂತಿಲ್ಲ, ಅದರ ವಾದವನ್ನು ತಳ್ಳಿಹಾಕುವಂತಿಲ್ಲ, ಸುಮ್ಮನೆ ನಿದ್ದೆ ಬಂತೆಂದು ನಟಿಸುವಂತಿಲ್ಲ. ಯಾಕೆಂದರೆ ರಾತ್ರಿಯ ಪ್ರಯಾಣಗಳಲ್ಲಿ ನನಗೆ ನಿದ್ದೆ ಬರುವುದು ನೂರಕ್ಕೆ ಒಂದು ಬಾರಿ ಮಾತ್ರ. ಈ ವಿಷಯ ನನ್ನ ಮನಸ್ಸಿಗೂ ಗೊತ್ತು, ಹಾಗಾಗಿಯೇ ಸುಮ್ಮನೆ ಕಣ್ಣು ಮುಚ್ಚಿಕೊಂಡ ನನ್ನ ಎದೆಯ ಮುಳ್ಳಾಗಿ ತಿವಿಯುತ್ತದೆ, ನಿಟ್ಟುಸಿರಿಟ್ಟು ಕೊನೆಗೂ ಶರಣಾಗಿ ಮಾತನಾಡುವಂತೆ ಮಾಡುತ್ತದೆ. ಕೊನೆಗೂ ಅದರೊಂದಿಗೆ ಎಲ್ಲ ಮಾತುಗಳನ್ನು ಮುಗಿಸಿ, ತಪ್ಪೊಪ್ಪಿಗೆ ಮಾಡಿಕೊಂಡು ಸಾಕಪ್ಪಾ ಅನ್ನುವಷ್ಟರಲ್ಲಿ ಅಂತರಾಳದಲ್ಲೆಲ್ಲೋ ಅಡಗಿಸಿಟ್ಟಿದ್ದ ನಿನ್ನ ನೆನಪಿನ ಪುಟಗಳ ಧೂಳು ಕೊಡವಿ, ನನ್ನ ಅಂತಃಚಕ್ಷುವಿನ ಮುಂದೆ ಚಾಚುತ್ತದೆ, ನೆನಪುಗಳನ್ನೆಲ್ಲ, ಅರ್ಧಮರ್ಧ ಕಂಡಿದ್ದ ಕನಸುಗಳನ್ನೆಲ್ಲ, ಕನಸಿನ ತುಣುಕುಗಳನ್ನೆಲ್ಲ ನನ್ನ ಮುಂದೆ ಹರಡಿ, ತಿರುವಿಹಾಕಿ ಈಗೇನು ಮಾಡ್ತೀಯಾ ಎಂದು ನನ್ನನ್ನು ಕೆಣಕುತ್ತದೆ...

ಏನೂ ಮಾಡುವಂತಿಲ್ಲ, ಎಲ್ಲವೂ ನಿರ್ಧಾರಿತವೆಂದರೆ ನನ್ನ ಮಾತನ್ನೇ ಕೇಳುವುದಿಲ್ಲ. ಸಣ್ಣಮಗುವಿನಂತೆ ರಚ್ಚೆಹಿಡಿಯುತ್ತದೆ, ನಿನಗೇನು ಕಮ್ಮಿ, ನಿನ್ನ ಪ್ರಯತ್ನ ಸಾಲದು, ಇಷ್ಟಕ್ಕೇ ಬಿಟ್ಟರೆ ಹೇಗೆ ಎಂದೆಲ್ಲ ನನ್ನೆದುರು ಬೇಡಬೇಡವೆಂದರೂ ಹೊಸ ಹೊಸ ಕನಸುಗಳ ಚಿತ್ತಾರ ಬರೆಯುತ್ತದೆ. ಆ ಚಿತ್ತಾರವನ್ನು ಅಳಿಸಲೂ ಆಗದೇ ಬೆಪ್ಪನಂತೆ ಬಿಡುಗಣ್ಣು ಮಾಡಿಕೊಂಡು ನೋಡುತ್ತ ಕೂರುತ್ತೇನೆ ನಾನು, ನನ್ನ ಮನಸ್ಸು ನನ್ನ ಮೇಲೆ ನಡೆಸುವ ಸಮ್ಮೋಹನಕ್ಕೆ ಹೊರಗಡೆ ಸುರಿಯುತ್ತಿರುವ ಮಳೆಯ ತೋಂತನನವೇ ಹಿನ್ನಲೆ ಸಂಗೀತ.

...ನಾನು ತುಂಬಾ ತಡವಾಗಿ ಪ್ರೇಮದಲ್ಲಿ ಸಿಲುಕಿಕೊಳ್ಳುತ್ತೇನೆ ಅಂತ ನನ್ನ ಯಾವುದೋ ಒಂದು ಜಾತಕದಲ್ಲಿ ಓದಿದ್ದೆ. ನನ್ನ ಸ್ನೇಹಿತೆ ಅದನ್ನು ಕೇಳಿ ನಕ್ಕಿದ್ದಳು, “ಹೌದು, ನಲ್ವತ್ತೈದು ವರ್ಷ ಅಂದ್ರೆ ತುಂಬಾನೆ ತಡವಾಗುತ್ತೆ!” ನಾನು ರೇಗಿದಂತೆ ಮಾಡಿ ಸುಮ್ಮನೆ ವಾದ ಹೂಡಿದ್ದೆ, “ಇಲ್ಲ, ಇಪ್ಪತ್ತೇಳೆಂದರೂ ತಡವೇ!” ಯಾಕೆಂದರೆ ಇಪ್ಪತ್ತೇಳೆಂಬುದು ಎಲ್ಲ ಹುಡುಗರ ಪಾಲಿಗೆ ಕನಸ ನನಸು ಮಾಡಿಕೊಳ್ಳುವ ವಯಸು. ಅವರೆಲ್ಲ ಮನೆ, ಮದುವೆ, ಮಕ್ಕಳೂಂತ ವ್ಯವಸ್ಥಿತ ವಾಸ್ತವತೆಯಲ್ಲಿ ಕಳೆದುಹೋಗುತ್ತಿರುವಾಗ ನಾನು ಈಗ ತಾನೇ ತಡವಾಗಿ ಪ್ರೇಮದ ಕಿಡಿತಾಕಿದ ಮತಾಪಿನ ಕಡ್ಡಿ! ಝೇಂಕರಿಸಿಕೊಂಡು ಹೊಲವನ್ನೆಲ್ಲ ಅಲೆಯುತ್ತ ಬಂದ ಪ್ರೀತಿಯ ಜೇನ್ನೊಣದಿಂದ ಕಟ್ಟಕೊನೆಗೆ ಪರಾಗ ಸ್ಪರ್ಶಮಾಡಿಸಿಕೊಂಡ ಸಣ್ಣ ಹೂ–ಸೂರ್ಯಕಾಂತಿ!

ನನ್ನ ವಾದಕ್ಕೆ ಸ್ನೇಹಿತೆ ಸುಳ್ಳೇ ಬೆರಗುಗೊಂಡು “ಹೌದಾ ಪರಾಗಸ್ಪರ್ಶವಾಯ್ತಾ? ಕಡೆಗೂ ನಿನ್ನ ಜೊಳ್ಳು ತುಂಬಿದ ತಲೆ ಬಲಿಯಿತಾ?” ಅಂತೆಲ್ಲ ತಮಾಷೆಮಾಡಿ ನನ್ನಿಂದ ಬೈಸಿಕೊಂಡಿದ್ದಳು ಮತ್ತು ಸಣ್ಣ ಕುಹುಕದ ನಗುವಿನೊಂದಿಗೆ ಒಪ್ಪಿಕೊಂಡಿದ್ದಳು, “ಹೌದು, ನೀನು ಬದಲಾಗಿದೀಯ” ನನ್ನ ಪ್ರಕಾರ ಬದಲಾವಣೆಯೇ ಜೀವನ, “Change is Life” ಕೆಟ್ಟದಾಗಲೀ ಒಳ್ಳೆಯದಾಗಲಿ ಬದಲಾವಣೆಗಳಾಗುತ್ತಿದ್ದರೇ ಜೀವನ ನಿತ್ಯ ಪ್ರವಹಿತ ನಿರ್ಝರಿ, ಇಲ್ಲದಿದ್ದಲ್ಲಿ ನಿಂತಲ್ಲೇ ಕೆಸರು ತುಂಬಿಕೊಂಡು, ಹಸಿರು

ಪಾಚಿಗಟ್ಟಿಕೊಂಡುಬಿಡುವ ನೀರಿನ ಗುಂಡಿ. ನಿನ್ನ ನೋಡಿದ ಮೇಲೆ, ನಾನು ನನಗೋಸ್ಕರವಲ್ಲವಾದರೂ ನಿನಗೋಸ್ಕರವಾದರೂ ಬದಲಾಗಬೇಕೆಂದುಕೊಂಡೆ, ಮತ್ತು ಬದಲಾದೆ ಕೂಡ! ಒಳ್ಳೆಯದೋ ಕೆಟ್ಟದೋ ಕಿಂಚಿತ್ತೂ ಯೋಚಿಸದೇ, ವಿವೇಚನೆಯನ್ನೂ ಮಾಡದೇ ಮನಸು ಸೃಜಿಸಿಕೊಟ್ಟ ನಿನ್ನ ಕನಸುಗಳನ್ನು ನನ್ನ ಕಂಗಳಲ್ಲಿಟ್ಟುಕೊಂಡು ಸುಮ್ಮನೆ ಅಮಲೇರಿದವನಂತೆ ಬದಲಾಗುತ್ತಾ ಹೋದೆ. ಕೊನೆಗೆ ಇದೆಲ್ಲದರಿಂದ ನನ್ನನ್ನು ವಾಸ್ತವಕ್ಕೆಳೆದು ತಂದದ್ದು ನಿನ್ನ ಉತ್ತರ.

ನಿನ್ನ ಉತ್ತರದಿಂದ ನನ್ನ ಎದೆಯೊಡೆದರೂ ನಿನಗೋಸ್ಕರ ಬದಲಾಗುತ್ತಾ ಬಂದಿದ್ದು ಒಳ್ಳೆಯದೇ ಆಯಿತು ಎನಿಸಿತು. ಈಗ ನನ್ನೆಲ್ಲ ಹಳೆಯದನ್ನು ವಿವೇಚನೆಯಿಂದ ನೋಡುವ, ಹೊಸತನ್ನು ಸ್ವಲ್ಪವಾದರೂ ಅರಿತುಕೊಳ್ಳುವ, ಹೊಸ ರಾಗಕ್ಕೆ, ಹೊಸ ಹಾಡಿಗೆ ಕಾಯುವ ತಾಳ್ಮೆ ಬಂದಿದೆ. ಹಾಗಾಗಿ ಬದಲಾವಣೆ ನನ್ನಲ್ಲಿನ್ನೂ ಜಾರಿಯಲ್ಲಿರುವ ಪ್ರಕ್ರಿಯೆ. ಈಗ ನನ್ನ ಹೃದಯದ ಒಳಗಡಲ ರತ್ನ ಪುರಿಯ ಗುಡಿಯ ಗರ್ಭದಲ್ಲಿ ದೇವರಿಲ್ಲದ ಖಾಲಿ ಪೀಠದೆದುರು ಸಣ್ಣಗೆ ಉರಿಯುವ ನಂದಾದೀಪದ ಹೆಸರು–ನಿರೀಕ್ಷೆ!

ಇಷ್ಟೆಲ್ಲ ಸಮಾಧಾನವಿತ್ತರೂ ಮನಸ್ಸಿಗೆ ಸಮಾಧಾನವಿಲ್ಲ. ಅದು ಸುಮ್ಮನೆ ನಿನ್ನ ಸುತ್ತಲೇ ಹೊಸ ಕನಸುಗಳ ನೇಯುತ್ತದೆ, ಜರುಗಲಾರದ ಅಸಾಧ್ಯವಾದ ಪವಾಡವೊಂದರ ದಾರಿಕಾಯುತ್ತೇನೆ ಅನ್ನುತ್ತದೆ, ಮುಂದೆ ಹೋಗಲೇ ಬೇಕಾದ ದಾರಿಯಲ್ಲಿ ನಡೆಯುತ್ತಿದ್ದರೂ ಮತ್ತೆ ಮತ್ತೆ ಹಿಂತಿರುಗಿ ಬಿಟ್ಟುಬಂದ ಕನಸುಗಳ ಮನೆಯ ಬಾಗಿಲನ್ನೇ ನೋಡುತ್ತದೆ, ಎಲ್ಲಾದರೂ ಬಾಗಿಲು ತೆರೆದುಕೊಂಡು ಅವೆಲ್ಲ ಕನಸುಗಳೊಳಗೆ ನಿಜವಾದ ನನಸೊಂದು ಇಣುಕುಹಾಕಿ ತೆರೆದ ತೋಳುಗಳಿಂದ ವಾಪಸ್ಸು ಕರೆಯುತ್ತದೆಯೇನೋ ಎಂದು ಕಾಲೆಳೆದುಕೊಳ್ಳುತ್ತ ಸಾಗುತ್ತದೆ, ಈಗ ಅದನ್ನು ಸಂತಯಿಸುವ ಸರದಿ ನನ್ನದು!...

ಬೆಳಗಾಗುತ್ತಿದೆ, ಇನ್ನೇನು ನನ್ನೂರು ಬಂದೇ ಬಿಟ್ಟಿತು! ಬೆಳಗಿನ ಜಾವಕ್ಕೇ ಎದ್ದು ಸ್ನಾನ ಮಾಡಿ, ಬಾಗಿಲು ಪೂಜೆ ಮಾಡಿಕೊಂಡು ಉಳಿದ ಹೆಂಗಸರೊಂದಿಗೆ ಗಂಗೆ ತರಲು ಊರ ಬಾವಿಯ ಬಳಿ ಬಂದು ಪೂಜೆ ಮಾಡುತ್ತಿರುತ್ತಾಳೆ ನನ್ನಮ್ಮ. ಅವರೆಲ್ಲರ "ಇನ್ನೂ ಬರಲಿಲ್ವಾ?" ಅನ್ನೋ ಪ್ರಶ್ನೆಗಳಿಗೆ "ಬರೋಕೆ ಬೆಳಗ್ಗೆ ಆಗುತ್ತೆ ಅಂದಿದ್ದ" ಅಂತೆಲ್ಲ ಉತ್ತರಿಸುತ್ತ ಬಾವಿ ಮುಂದಿನ ಕವಲು ದಾರಿಯನ್ನೇ ಆಗೀಗ ನೋಡುತ್ತ ಕಣ್ಣಂಚಿನಲ್ಲೇ ನಿರೀಕ್ಷೆಯ ದೀಪವುರಿಸುತ್ತಿರುತ್ತಾಳೆ.

ಮೈಮುರಿದು ಆಕಳಿಸಿ, ಮೆಲ್ಲನೆ ಮೊಬೈಲ್ ತೆಗೆದು ಸುಂದರವೆನಿಸುವ ನಾಲ್ಕು ಸಾಲು ಟೈಪಿಸಿ ಅವಳಿಗೆ ಎಸ್ಸೆಮ್ಮೆಸ್ ಮಾಡುತ್ತೇನೆ; ನನ್ನೂರಿನ ನಿಲ್ದಾಣ ಹೊಕ್ಕ ಬಸ್ಸು ನಿಲ್ಲುತ್ತದೆ; ಬ್ಯಾಗನ್ನು ಹೆಗಲೇರಿಸಿಕೊಂಡು, ಬಸ್ಸಿನಿಂದಿಳಿದು, ಆಟೋ ಹಿಡಿದುಕೊಂಡು ಹಳ್ಳಿಯ ಜಾಡು ಹಿಡಿಯುತ್ತೇನೆ; ಇನ್ನೇನು ಊರ ಬಾವಿಯ ಕವಲು ದಾರಿಗೆ ತಿರುಗಿಕೊಳ್ಳಬೇಕು, ಜೇಬಿನಲ್ಲಿದ್ದ ಮೊಬೈಲ್ ರಿಂಗಣಿಸುತ್ತದೆ! ಥಕ್ಕನೆ ತೆಗೆದು ನೋಡುತ್ತೇನೆ, "ಥ್ಯಾಂಕ್ಯೂ, ___ನಿನಗೂ ಶುಭದಿನ!" ನನ್ನ ಎಸ್ಸೆಮ್ಮೆಸ್‌ಗಳಿಗೆ ಯಾವತ್ತೂ ಬಾರದ ಉತ್ತರ ಇವತ್ತು ಬಂದಿದೆ. ನನ್ನೆದೆಗೆ ಸಾವಿರ ಸಾವಿರ ಜ್ಯೋತಿರ್ವರ್ಷಗಳ ವೇಗ! ಮನಸ್ಸು? ಅದೆಲ್ಲಿದೆ ನನ್ನ ಹಿಡಿತದಲ್ಲಿ?

ಆಟೋದಿಂದಿಳಿದು ನಸುನಗುತ್ತ ಬಾವಿಯ ಬಳಿಗೆ ನಡೆಯುತ್ತಿರುವ ನನ್ನನ್ನು ಅಮ್ಮ ತನ್ನೆಲ್ಲ ಪೂಜೆಯ ಕೈ ನಿಲ್ಲಿಸಿ, ಹಾಗೇ ನಿಂತು ತನ್ನದೇ ದೃಷ್ಟಿ ತಾಕುವಂತೆ ಹಸನ್ಮುಖಿಯಾಗಿ ನೋಡುತ್ತಿದ್ದಾಳೆ, ಅಕ್ಕಪಕ್ಕದಲ್ಲಿರುವ ಹೆಂಗಸರು ನಗುತ್ತ ತಮ್ಮೊಳಗೇ ಪಿಸುಗುಡುತ್ತ ನನ್ನನ್ನೇ ಗಮನಿಸುತ್ತ, ನಗು ಬೀರುತ್ತಿದ್ದಾರೆ, "ಅದ್ಯಾಕೆ ಹಂಗ್ ತಲೆಗೂದ್ಲು ಬೆಳೆಸವ್ನೇ?" "ತುಂಬಾ ಬದಲಾಗಿದಾನೆ, ಬಣ್ಣ ಬಂದಿದಾನೆ?" "ಬೆಂಗಳೂರು ನೀರಿನ ಮಹಾತ್ಮೆ!" "ಕಿವಿಗೆ ಒಂಟೀನೂ ಚುಚ್ಸಿರೊ ಹಂಗೌವ್ನೆ...", "ಸುಂದ್ರಕ್ಕಾ, ಸೊಸೇನ ರೆಡೀ ಮಾಡೋದೇ ಇನ್ನು..."

ಮೇಲೆ ಮಳೆಯ ಮೋಡ ಕವಿದ ಬೂದಿ ಬಣ್ಣದ ಆಕಾಶದಲ್ಲಿ ಮುಂಜಾವಿನ ಬೆಳಕು ಹಾಗೇ ಹಾಲು ಹರಿದಂತಾಗಿದೆ; ಮಣ್ಣಿನ ರಸ್ತೆ ನಿನ್ನೆ ಮೊನ್ನೆಯ ಶ್ರಾವಣದ ಕೊನೆಯ ಮಳೆಯಲ್ಲಿ ನೆನೆದು ಹದವಾಗಿದೆ; ಮನೆಗಳ ಬಾಗಿಲಿಗೆ ಹಸಿರು ತೋರಣ, ಮುಂದೆ ಅಂಗಳದಲ್ಲಿ ರಸ್ತೆಗೆ ಚಾಚಿದಂತೆ ಹಬ್ಬದ ರಂಗೋಲಿಗಳು...

ನಾನು ಅಮಲೇರಿದವನಂತೆ ಕೆಂಪೇರಿದ ಮುಖ ಹೊತ್ತು ಬಾವಿಕಟ್ಟೆಯ ಬಳಿಗೆ, ನನ್ನಮ್ಮನ ಹತ್ತಿರಕ್ಕೆ ನಡೆಯುತ್ತಿದ್ದೇನೆ, ಹಾಗೆಯೇ ಯೋಚಿಸುತ್ತಿದ್ದೇನೆ – ಹುಹ್! ಇನ್ನು ಈ ಮನಸನ್ನ ಹಿಡಿಯೋದು ಹೇಗೆ? ಹಳೆಯ ಚಿತ್ರದ ಹೊಸ ಕನಸನೆಲ್ಲ ಕಟ್ಟಿಕೊಳ್ಳಲು ಶುರುಮಾಡಬೇಡ ಎನ್ನುವುದು ಹೇಗೆ? ನನ್ನ ಮಾತು ಕೇಳೀತೇ ಅದು? ನನ್ನ ಹತೋಟಿಗೆ ಸಿಕ್ಕೀತೆ ಈಗ?

**"ಎಲ್ಲಿ ಜಾರಿತೋ ಮನವು ಎಲ್ಲೆ ಮೀರಿತೋ, ಎಲ್ಲಿ ಅಲೆಯುತಿಹುದೋ ಏಕೆ ಕಾಣದಾಯಿತೋ"**

ಹ್ಯಾವ್ ಎ ನೈಸ್ ಡೇ

ಶಿವಕುಮಾರ ಕೆ. ಎಸ್. ***ks_shivu@yahoo.com***